ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 25-31**
**©*IIMRD*, Mysuru**

IIMRD JOURNALS
**www.iimrd.com**

# ಮೈಸೂರಿನ ಗಾಂಧಿನಗರದಲ್ಲಿ ನಡೆಯುವ ಕರಗ ಮಹೋತ್ಸವಗಳು: ಒಂದು ಅಧ್ಯಯನ

**ಜಯದೇವ.ಎಂ[1] ಮತ್ತು ಪ್ರೊ. ನಂಜಯ್ಯ ಹೊಂಗನೂರು[2]**

**ಪೀಠಿಕೆ**

ಕರಗ ಎಂಬುದು ಕರ್ನಾಟಕದ ಪ್ರಸಿದ್ಧ ಜಾನಪದ ಆಚರಣೆಯಾಗಿದ್ದು, ಈ ಭಾಗಗಳಲ್ಲಿ ದ್ರೌಪ್ತಮ್ಮ ಎಂದು ಕರೆಯಲ್ಪಡುವ ದ್ರೌಪತಿಗೆ ಅರ್ಪಿತವಾದ ಆಚರಣೆಯಾಗಿ ಹುಟ್ಟಿಕೊಂಡಿತು. ಈ ಆಚರಣೆಯನ್ನು ಹುಣ್ಣಿಮೆಯ ದಿನದಂದು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಆದಿಶಕ್ತಿ ಶ್ರೀ ದ್ರೌಪದಿಯನ್ನು, ವಹ್ನಿಕುಲ ಕ್ಷತ್ರಿಯ ಜನಾಂಗದವರು ಕುಲದೇವತೆಯಾಗಿ ಆರಾಧಿಸುತ್ತಾರೆ. ಧಾರ್ಮಿಕ ಮಡಕೆಯನ್ನು ನೀರಿನಿಂದ ತುಂಬಿಸಿ ಹಲವಾರು ಅಡಿ ಎತ್ತರದ ಅಲಂಕಾರಗಳಿಂದ ಶೃಂಗರಿಸಿ, ಮೆರವಣಿಗೆಯಲ್ಲಿ ಥಾವಿ, ನಾದಸ್ವರಂ, ಮುನಿ, ಉಡುಕ್ಕ, ಪಂಬಾ ಮುಂತಾದ ಹಲವಾರು ಸಂಗೀತ ವಾದ್ಯಗಳೊಂದಿಗೆ ಮೆರವಣಿಗೆಯನ್ನು ನಡೆಸುವಾಗ ನರ್ತಕರು ವಿವಿಧ ಚಮತ್ಕಾರಿಕ ಸಾಹಸಗಳನ್ನು ಮಾಡುತ್ತಾರೆ.

***ಕರಗ*** ಎನ್ನುವ ಪದಕ್ಕೆ 'ಕುಂಭ, ಜಲಪಾತ್ರೆ, ಕಮಂಡಲ' ಎಂಬ ಅನೇಕ ಅರ್ಥಗಳಿವೆ. ಸಂಸ್ಕೃತದಲ್ಲಿ 'ಕರ' ಎಂಬುದಕ್ಕೆ 'ನೀರು' ಎಂಬ ಅರ್ಥವಿದೆ. ತುಳು ಭಾಷೆಯಲ್ಲಿ 'ಕರ'ವೆಂದರೆ ಮಣ್ಣಿನ ಮಡಿಕೆ ಎಂದರ್ಥ. ಕರಗ ಎಂಬ ಪದ ಕರ–ಕೈ, ಅಗ–ಹಿಡಿದ = ಕೈಹಿಡದ ಎಂದಾಗುತ್ತದೆ (ಅಂಗಳೋಟ್ ಪಿಡಿದುದು ಕರಗಂ). ಹೀಗೆ 'ಕರಗ' ಪದಕ್ಕೆ ಕುಂಭ, ಜಲಪಾತ್ರೆ ಇತ್ಯಾದಿ ಜಲಸಂಬಂಧಿ ಅರ್ಥಗಳಿವೆ." ಕರಗ ಉತ್ಸವವು ಮುಖ್ಯವಾಗಿ ಬೆಂಗಳೂರು, ಕೋಲಾರ, ಮಾಲೂರು, ದೇವನಹಳ್ಳಿ ಮತ್ತು ಆನೆಕಲ್‌ನಲ್ಲಿ ವಿಶೇಷವಾಗಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಕರಗ ಈ ಪ್ರದೇಶಗಳಿಗಷ್ಟೇ ಸೀಮಿತವಾಗದೇ ಆಯಾ ಊರುಗಳ ಸಂಪ್ರದಾಯದ ಚೌಕಟ್ಟಿನಲ್ಲಿಯೂ ಸಹ ಕರಗದ ಆಚರಣೆಯನ್ನು ಮಾಡಲಾಗುತ್ತದೆ.

ಕರಗ ಉತ್ಸವವನ್ನು ಕೋಲಾರ ಜಿಲ್ಲೆಯ ನರಸಾಪುರ, ಬೆಂಗಳೂರಿನ ವರ್ತೂರು, ರಾಮಗೊಂಡನಹಳ್ಳಿ ಹಾಗೂ ಬೆಂಗಳೂರು ನಗರದಲ್ಲಿಯೂ ಸಹ ಆಚರಿಸುತಾರೆ. ಹಾಗೆಯೇ ಮಡಕೇರಿಯಲ್ಲಿ ನವರಾತ್ರಿ ಉತ್ಸವದ ಸಂದರ್ಭದಲ್ಲಿ ಆಚರಿಸುತ್ತಾರೆ ಹಾಗೂ ಮೈಸೂರಿನಲ್ಲಿಯೂ ಸಹ ಈ ಕರಗ ಉತ್ಸವವು ನಡೆಯುವುದನ್ನು ನಾವು ಕಾಣಬಹುದು.

ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡಿರುವ ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು ಕರಗ ದೇವಸ್ಥಾನ ಮಾತ್ರವಲ್ಲದೆ, ಶ್ರಾವಣದಂದು ಪಂಚಮುಖಿ ಆಂಜನೇಯಸ್ವಾಮಿ ಮೂರ್ತಿಗೆ ವಿಶೇಷ ಪೂಜಾ ಕಾರ್ಯಗಳನ್ನು ನಡೆಸಲಾಗುತ್ತದೆ. ಇಟ್ಟಿಗೆಗೂಡಿನಲ್ಲಿರುವ ಕರಗ ದೇವಸ್ಥಾನ

*[1]ಸಂಶೋಧಕರು, ಕನ್ನಡ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.*
*[2]ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

ಹೆಚ್ಚು ಪ್ರಸಿದ್ಧಿಯಾಗಿದೆ. ದೊಡ್ಡಕೆರೆಯು ಜೀವಂತವಾಗಿದ್ದಾಗಿನಿಂದಲೂ ಮೈಸೂರು ಕರಗ ಮಹೋತ್ಸವವು ಹೆಸರುವಾಸಿಯಾಗಿದ್ದು, ಜಯಚಾಮರಾಜ ಒಡೆಯರು ಈ ದೇವಸ್ಥಾನ ನಿರ್ಮಾಣಕ್ಕೆ ಜಾಗ ನೀಡುವ ಮೂಲಕ ಪ್ರೋತ್ಸಾಹಿಸಿದ್ದರು.

ಮೈಸೂರು ಕರಗ ಮಹೋತ್ಸವವು ಏಪ್ರಿಲ್/ಮೇ ತಿಂಗಳಿನಲ್ಲಿ ಐದು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಮೈಸೂರು ದಸರಾದ ಪ್ರಮುಖ ಆಕರ್ಷಣೆ ಚಿನ್ನದ ಅಂಬಾರಿ ಮೆರವಣಿಗೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರು ಬೆಟ್ಟದಿಂದ ಅರಮನೆಗೆ ತೆರಳುವ ಮಾರ್ಗದಲ್ಲಿ ಇಟ್ಟಿಗೆಗೂಡಿನ ಮೈಸೂರು ಕರಗ ದೇವಸ್ಥಾನದಲ್ಲಿ ಸ್ವೀಕರಿಸುವ ಅಮೃತ ಘಳಿಗೆ ಪೂಜಾ ಕಾರ್ಯದಲ್ಲಿ ಮಹಾಮಂಗಳಾರತಿ ನಡೆಯುತ್ತದೆ. 95ನೇ ಕರಗ ಮಹೋತ್ಸವದ ಅಂಗವಾಗಿ 25 ಜತೆಗಳ ನಾಡಕುಸ್ತಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿತ್ತು. 96ನೇ ಕರಗ ಉತ್ಸವವನ್ನು ಲಾಕ್‌ಡೌನ್‌ನಿಂದಾಗಿ ಸರಳವಾಗಿ ಆಚರಿಸಲಾಯಿತು. ಮೈಸೂರಿನ ಪ್ರಮುಖ ನಗರಗಳಲ್ಲಿ ಒಂದಾದ ಗಾಂಧಿನಗರದಲ್ಲಿ ನಡೆಯುವ ಚಾಮುಂಡೇಶ್ವರಿ, ದುರ್ಗಾಂಭ, ಚಿಕ್ಕಮ್ಮದೇವಿ ಮತ್ತು ದೊಡ್ಡಮ್ಮ ತಾಯಿ ಕರಗೋತ್ಸವಗಳು ವಿಜೃಂಭಣೆಯಿಂದ ನಡೆಯುವುದನ್ನು ನಾವು ಕಣ್ತುಂಬಿಕೊಳ್ಳಬಹುದು.

**ಚಾಮುಂಡೇಶ್ವರಿ ಕರಗ ಮಹೋತ್ಸವ**

ಮೈಸೂರಿನ ಗಾಂಧಿನಗರದಲ್ಲಿ 11ನೇ ಕ್ರಾಸ್‌ನಲ್ಲಿ ನೆಲೆಸಿರುವ ತೆಲುಗು ಭಾಷಿಕರಾದ ಮಾದಿಗ ಸಮುದಾಯದವರು ಚಾಮುಂಡೇಶ್ವರಿ ಕರಗವನ್ನು ಆಚರಿಸುತ್ತಾರೆ. ಚಾಮುಂಡೇಶ್ವರಿ ದೇವಿಯ ಕರಗಕ್ಕೆ ಯುಗಾದಿ ಹಬ್ಬಕ್ಕೂ ಮುನ್ನ ಕುಲದ ಯಜಮಾನರೆಲ್ಲಾ ಸೇರಿ ಕರಗ ನಡೆಸುವ ದಿನಾಂಕ ಮತ್ತು ಸಮಯವನ್ನು ತೀರ್ಮಾನಿಸುತ್ತಾರೆ. ಕರಗ ನಡೆಯುವ ಮೂರು ದಿನದ ಮುಂಚಿತವಾಗಿ ಚಾಮುಂಡೇಶ್ವರಿಗೆ ದಾಳ ನೆಡುವ ಪದ್ಧತಿಯಿಂದ ಪ್ರಾರಂಭವಾಗುತ್ತದೆ.

ದಾಳವನ್ನು ಅರಳಯ್ಯನವರ ಮೂಲ ಚರ್ಮದಿಂದ ತಯಾರಿಸುತ್ತಾರೆ. ಆ ದಾಳದಲ್ಲಿ ಸೂರ್ಯ, ಚಂದ್ರ ಮುಂತಾದ ಸಾಂಕೇತಿಕ ಚಿತ್ರಗಳನ್ನು ರೂಪಿಸಿ ದಾಳವನ್ನು ಬಿದಿರಿನ ಗಳಕ್ಕೆ ಕಟ್ಟಿ ಹಾರಿಸಲಾಗುತ್ತದೆ. ದಾಳವನ್ನು ನೆಡುವ ಮೊದಲು ಊರ ಮಾರಿಯನ್ನು ಓಡಿಸುವ ಆಚರಣೆ ರೂಢಿಯಲ್ಲಿದೆ. ಕೆಲವು ವಿಧವೆಯರನ್ನು ಮುಂಚಿತವಾಗಿಯೇ ದೇವಾಲಯಕ್ಕೆ ಕರೆಸಿ, ಅವರಿಗೆ ಬೇವಿನ ಸ್ನಾನ ಮಾಡಿಸಿ, ಕುಡಿಯಲು ಅಂಬಲಿ, ಕಾಳುಗಳು, ಮಜ್ಜಿಗೆ, ಪಾನಕವನ್ನು ನೀಡುತ್ತಾರೆ. ಹಾಗೆ ಸೇಂದಿಯನ್ನು ಕುಡಿಸುತ್ತಾರೆ. ತದನಂತರ ಆ ಮಾರಿಯರು ಸಂತೋಷವಾದ ಬಳಿಕ ಅವರನ್ನು ಊರಿನಿಂದ ಹೊರಗೆ ಓಡಿಸುವ ಪದ್ಧತಿ ಇದೆ. ಮಾರಿಯರನ್ನು ಓಡಿಸಿದ ನಂತರ ದಾಳದ ಪೂಜೆಗೆ ಸಿದ್ಧರಾಗುತ್ತಾರೆ. ದಾಳಕ್ಕೆ ಪೂಜೆ ಸಲ್ಲಿಸಿದ ನಂತರ ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಅದನ್ನು ತಂದು ನೆಡಲಾಗುತ್ತದೆ. ಇಲ್ಲಿಂದ ಚಾಮುಂಡೇಶ್ವರಿ ಕರಗಕ್ಕೆ ಚಾಲನೆ ದೊರೆತಂತಾಗುತ್ತದೆ.

ಕರಗವು ತನ್ನದೇ ಆದ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಇದು ಜನಪದ, ಧಾರ್ಮಿಕ ಕಲೆಯಾಗಿಯೂ ಸಹ ಕಂಡುಬರುತ್ತದೆ. ಪ್ರಾದೇಶಿಕ ಹಿನ್ನೆಲೆ ಮತ್ತು ಅಲ್ಲಿನ ಸಂಸ್ಕೃತಿಗೆ ಅನುಗುಣವಾಗಿ ಕರಗದ ಆಚರಣೆಯು ಭಿನ್ನ ಭಿನ್ನ ನೆಲೆಯನ್ನು ಕಂಡುಕೊಂಡಿದೆ.

ಗಾಂಧಿನಗರದ ಚಾಮುಂಡೇಶ್ವರಿ ಕರಗದ ಆಚರಣೆಯಲ್ಲಿ ಅವರು ಮೊದಲಿಗೆ ಕಾರಂಜಿ ಕೆರೆಯ ಬಳಿ ಹೋಗಿ ಹೋಮ, ಗಂಗಾಸ್ನಾನ ಮತ್ತು ಪುರೋಹಿತರಿಂದ ಅರ್ಚನೆಗೊಂಡ ಕಳಸದೊಂದಿಗೆ ದೇವರಿಗೆ ದೃಷ್ಟಿಯನ್ನು ತೆಗೆದ ನಂತರ ದೇವಿಯನ್ನು ಊರಿನ ಪಲ್ಲಕ್ಕಿಯಲ್ಲಿರಿಸಿ, ಕಾರಂಜಿ ಕೆರೆಯ ಹತ್ತಿರದಿಂದ ಸೆಂಚುರಿ ಪಾರ್ಕ್, ಸರ್ಕಸ್ ಗ್ರೌಂಡ್, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ನಜ಼ರ್‌ಬಾದ್ ಮಾರ್ಗವಾಗಿ ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ಇದರ ಜೊತೆಗೆ ವಾದ್ಯ ಮೇಳಗಳು ಹಾಗೂ ಡೊಳ್ಳು, ಕೀಲುಕುದುರೆ ಇತ್ಯಾದಿ ಜಾನಪದ ಕಲಾ ತಂಡಗಳು, ಅಂಬೇಡ್ಕರ್ ಸರ್ಕಲ್, ಮಹದೇಶ್ವರ ದೇವಸ್ಥಾನದಿಂದ ಹೊರಟು ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ಸಾಗಿ, ದೇವಸ್ಥಾನದ ಗರ್ಭಗುಡಿಗೆ ತಲುಪಿದ ನಂತರ ಮಹಾಮಂಗಳಾರತಿ ನೆರವೇರಿಸಲಾಗುವುದು. ಹೀಗೆ ಬರುವ ಕರಗಕ್ಕೆ ಅಂಕದ ಬಾಗಿಲಿನಲ್ಲಿ ಕೋಣವನ್ನು ಬಲಿ ಕೊಡಲಾಗುತ್ತದೆ. ನಂತರ ಪ್ರತಿಯೊಂದು ಮನೆಯಿಂದಲೂ ಹಣ್ಣು ಕಾಯಿ ಪೂಜೆ, ತಂಬಿಟ್ಟಿನ ಆರತಿ ನೇರವೆರಿಸಲಾಗುತ್ತದೆ. ಇವುಗಳೆಲ್ಲವೂ ಬಹಳಷ್ಟು ಕಟ್ಟುನಿಟ್ಟಾದ ಪದ್ಧತಿಯೊಂದಿಗೆ ನಡೆಯುತ್ತವೆ. ಕರಗವು ವಿಶೇಷ ಬೆಳಕಿನ ಅಲಂಕಾರವನ್ನು ಹೊಂದಿರುತ್ತದೆ. ಇದಲ್ಲದೆ ಮಹಿಳೆಯರು, ಪುರುಷರು ನೃತ್ಯ ಮಾಡುತ್ತಾ ಸಾಗುವುದುಂಟು. ಕೆಲವರಿಗೆ ಮೈಮೇಲೆ ದೇವರು ಬರುವ ಪ್ರಸಂಗವು ನಡೆಯುತ್ತದೆ.

**ದೊಡ್ಡಮ್ಮ ತಾಯಿ ಜಾತ್ರೆಯ ಕರಗ ಮಹೋತ್ಸವ**

ದೊಡ್ಡಮ್ಮ ತಾಯಿ ಜಾತ್ರೆಯು ಗಾಂಧಿನಗರದ 11ನೇ ಕ್ರಾಸ್‌ನಲ್ಲಿನ ಪೌರಕರ್ಮಿಕರ ಕಾಲೋನಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯುವ ಕರಗೋತ್ಸವ ಇದಾಗಿದೆ. ದೊಡ್ಡಮ್ಮ ತಾಯಿ ಜಾತ್ರೆಯ ಕರಗೋತ್ಸವವು ಮೂರು ವರ್ಷಕೆ ಒಮ್ಮೆ ಏಪ್ರಿಲ್ ತಿಂಗಳಲ್ಲಿ ನಡೆಸಿಕೊಂಡು ಬರಲಾಗಿದೆ. ಕರಗೋತ್ಸವವನ್ನು ಸಾಕಷ್ಟು ವಿಜೃಂಭಣೆಯಿಂದ ಹಾಗೂ ದುಬಾರಿ ವೆಚ್ಚದಿಂದ ನಡೆಸಲಾಗುತ್ತದೆ. ನಜ಼ರ್‌ಬಾದ್‌ನ ಆದಿಶಕ್ತಿ ದೇವಾಲಯದಿಂದ ದೊಡ್ಡಮ್ಮ ತಾಯಿಯನ್ನು ಅಲಂಕರಿಸಿ ಸುಮಾರು ಇಪ್ಪತ್ತು ವಿವಿಧ ರೀತಿಯ ಮೇಳ, ವಾದ್ಯ ಮೊದಲಾದ ಕಲಾ ಪ್ರಕಾರಗಳ ಜೊತೆಗೆ ದೇವಿಯನ್ನು ತರಲಾಗುತ್ತದೆ. ಗಾಂಧಿ ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ಮುಖ್ಯ ರಸ್ತೆಗಳಲ್ಲಿ ದೇವಿಯ ಉತ್ಸವವನ್ನು ಮೆರವಣಿಗೆ ಮಾಡಲಾಗುತ್ತದೆ. ಯಾವುದೇ ಭೇದವಿಲ್ಲದೆ ಎಲ್ಲಾ ವರ್ಗದ ಜನರು ದೇವಿಗೆ ಪೂಜೆ ಸಲ್ಲಿಸುವ ಆಚರಣೆ ಇಲ್ಲಿದೆ. ಸುಮಾರು ಸಂಜೆ 7 ಗಂಟೆಗೆ ಪ್ರಾರಂಭವಾದ ಉತ್ಸವ ತಡರಾತ್ರಿ 12 ಗಂಟೆಗೆ ಊರನ್ನು ಬಂದು ಸೇರುತ್ತದೆ.

**ದೇವರು ತರುವುದು**

ದೇವರು ತರುವ ಕಾರ್ಯವು ವಿಶೇಷವಾಗಿದ್ದು, ಒಂಬತ್ತು ಮಡಕೆಗಳಲ್ಲಿ ಹೆಂಡವನ್ನು ತುಂಬಿಸಿ, ಊರಿನ ಹೆಣ್ಣು ಮಕ್ಕಳು ಕೈಯಲ್ಲಿ ಕಳಸವನ್ನಿಡಿದು ದೇವರನ್ನು ತರುತ್ತಾರೆ ಹಾಗೂ ಮೂರು ದೇವಾಲಯಗಳಲ್ಲಿ ಮೂರು ಗಡಿಗೆಯನ್ನಿರಿಸಿ ಪೂಜೆ ಸಲ್ಲಿಸುತ್ತಾರೆ. ಯಜಮಾನ್ ಚಾಮುಂಡಯ್ಯನವರ ಮನೆಯಿಂದ ಕುಂಭ ಗೂಡವನ್ನು ಬರ ಮಾಡಿಕೊಳ್ಳಲಾಗುತ್ತದೆ. ಹಾಗೆಯೇ ಎ.ರಾಮಯ್ಯ ಅವರ ಮನೆಯಿಂದ ನಗರ ಜ್ಯೋತಿ ಅಂದರೆ ತಂಬಿಟ್ಟಿನ ಆರತಿ ತರಲಾಗುತ್ತದೆ. ಕುಂಭಗೂಡವನ್ನು ಅಂದರೆ

ರಾಗಿ ಹಿಟ್ಟು, ಅಕ್ಕಿ ನುಚ್ಚಿನಿಂದ ಗೋಪುರವನ್ನು ಮಾಡಿ, ಸಣ್ಣ ಈರುಳ್ಳಿಯಿಂದ ಅದನ್ನು ಸುತ್ತಿ ಸಿಂಗಾರ ಮಾಡಿ ಹವಳವನ್ನು ಅದಕ್ಕೆ ತೊಡಿಸಿ ಪೂಜೆ ಸಲ್ಲಿಸಲಾಗುತ್ತದೆ.

**ಬಲಿ ನೀಡುವ ಆಚರಣೆ**

ದೇವಿಯ ಕರಗ ಉತ್ಸವವು ದೇವಸ್ಥಾನಕ್ಕೆ ಬಂದ ಬಳಿಕ ಮೂರು ದಿಕ್ಕುಗಳಲ್ಲೂ ಕೋಣವನ್ನು ಬಲಿ ಕೊಡಲಾಗುತ್ತದೆ ಹಾಗೂ ಅದರ ರಕ್ತ ಮತ್ತು ಹೊಟ್ಟೆಯ ಭಾಗದ ಬೇಡದ ವಸ್ತುಗಳನ್ನು ಕಲಸಿ ಎಲ್ಲರ ಮನೆಗಳಿಗೂ ಎರಚುವ ಆಚರಣೆ ಇದೆ. ಇದನ್ನು ಬಲಗ ಎಂದು ಕರೆಯಲಾಗುತ್ತದೆ. ಹೀಗೆ ಮಾಡುವುದರಿಂದ ತಾಯಿ ಸಂಪ್ರೀತಳಾಗುತ್ತಾಳೆಂಬ ನಂಬಿಕೆ ಇದೆ. ದುಷ್ಟಶಕ್ತಿಗಳು ಇದನ್ನು ನೋಡಿ ಇಲ್ಲಿಗೆ ಬಾರದೆ ಮುಂದೆ ಹೋಗುತ್ತವೆ ಎಂಬ ಸಾಂಕೇತಿಕ ಆಚರಣೆ ಇದಾಗಿದೆ. ಹೀಗೆ ಮಾಡುವಾಗ ಕೇರಿಯಲ್ಲಿ ಯಾರು ಹೊರಗೆ ಇರಬಾರದೆಂಬ ನಿರ್ಬಂಧವಿದೆ. ಅಂತೆಯೇ ಅದನ್ನು ನೋಡಿದವರಿಗೆ ಕೇಡಾಗಬಹುದು ಎಂಬ ಭಾವನೆಯೂ ಇದೆ. ಬಲಿಕೊಟ್ಟ ಕೋಣದ ತಲೆಯನ್ನು ಕುಕ್ಕೆಯಲ್ಲಿ ಮುಚ್ಚಿಟ್ಟು ದೀಪ(ಸೊಳ್ಳು) ಹಚ್ಚಲಾಗುತ್ತದೆ ಹಾಗೂ ಕೋಣವನ್ನು ಕಡಿದು ತಾಯಿಗೆ ಹಾಡು ಕಟ್ಟಿ ಬೈಯುವ ಸಂಪ್ರದಾಯವೂ ಇದೆ.

ಮರುದಿನ ಮಧ್ಯಾಹ್ನದ ವೇಳೆಗೆ ದೇವಿಗೆ ತಂಬಿಟ್ಟಿನ ಆರತಿಯನ್ನು ಮಾಡಲಾಗುತ್ತದೆ. ಒಂದು ಮನೆಯಿಂದ ನಾಲ್ಕು ತಂಬಿಟ್ಟಿನ ಆರತಿಯನ್ನು ತಯಾರಿಸಿ ತಂಪು ನೆರವೇರಿಸಲಾಗುತ್ತದೆ. ನಂತರ ಮನೆಗೊಂದು ಬಿಂದಿಗೆಯಂತೆ ನೀರು ತಂದು ದೇವಿಯ ಮೇಲೆ ಹಾಕಿ ಹಾಗೂ ದೇವಸ್ಥಾನದ ಸುತ್ತಲೆಲ್ಲಾ ಹಾಕಿ ತಂಪು ಮಾಡಲಾಗುತ್ತದೆ. ತದನಂತರ ದೇವಿಯನ್ನು ಕಳುಹಿಸಿಕೊಡಲಾಗುತ್ತದೆ. ಅಂದರೆ ಕೇರಿಯ ಮುಖಂಡರೆಲ್ಲಾ ಸೇರಿ ಊರಾಚೆ ಇರುವ ಹೆಕ್ಕದ ಗಿಡದ ಬಳಿ ಹೋಗಿ ದೇವರಿಗೆ ಪೂಜೆ ಸಲ್ಲಿಸಿ ಬಿಟ್ಟು ಬರುವ ಸಂಪ್ರದಾಯವಿದೆ. ಅಂತೆಯೇ ಬರುವಾಗ ಯಾರು ಹಿಂತಿರುಗಿ ನೋಡಬಾರದೆಂಬ ಕಟ್ಟಾಜ್ಞೆಯಿದೆ. ಹೀಗೆ ಊರಿನೊಳಗೆ ಬಂದ ಮುಖಂಡರು ಊರೊಳಗೆ ಬರುವ ಮೂರುಕೂಡಿದ ದಾರಿಯಲ್ಲಿ 9 ಅಥವಾ 7 ಗೆರೆಗಳನ್ನು ಎಳೆದು ನಿಂಬೆ ಹಣ್ಣುಗಳನ್ನು ಕತ್ತರಿಸಿ ಕಾಯಿಯನ್ನು ಒಡೆದು ಪೂಜಿಸಿ ಈಗ ಹೋಗಿ ಮತ್ತೆ ನಾವು ಕರೆದಾಗ ಬಾ ಎಂದು ದೇವಿಗೆ ಕೈಮುಗಿದು ತಮ್ಮ ಮನೆಗಳಿಗೆ ಹಿಂತಿರುಗುತ್ತಾರೆ.

**ಚಿಕ್ಕಮ್ಮ ಚಿಕ್ಕದೇವಿ ಕರಗ ಮಹೋತ್ಸವ**

ಗಾಂಧಿನಗರದ ಹಳೆಯ ದೇವಾಲಯಗಳಲ್ಲಿ ಚಿಕ್ಕಮ್ಮ ಚಿಕ್ಕದೇವಿ ದೇವಾಲಯವೂ ಸಹ ಒಂದು. ಈ ದೇವಾಲಯವು ಎರಡನೇ ಮುಖ್ಯ ರಸ್ತೆ, ಎರಡನೇ ತಿರುವಿನಲ್ಲಿದೆ. ಈ ದೇವಸ್ಥಾನದ ವಿಶೇಷವೆಂದರೆ ಪ್ರತಿ ವರ್ಷ ಏಪ್ರಿಲ್, ಮೇ ತಿಂಗಳಿನಲ್ಲಿ ಚಿಕ್ಕಮ್ಮ ದೇವಿಯ ಕರಗದ ಉತ್ಸವವು ನಡೆಯುತ್ತದೆ. ಏಳು ದಿನ ನಡೆಯುವ ಈ ವಿಶೇಷ ಕರಗದಲ್ಲಿ ದಿನಕ್ಕೊಂದು ಭಿನ್ನ ರೀತಿಯ ಪೂಜೆ ಆಚರಣೆಗಳು ನಡೆಯುತ್ತವೆ.

ಪ್ರಾರಂಭದ ದಿನದಂದು ದೇವಾಲಯವನ್ನು ಶುಚಿಗೊಳಿಸಿ ಮಡಿ ಮೈಲಿಗೆಗಳಿಂದ ಅಮ್ಮನನ್ನು ಬರಮಾಡಿಕೊಳ್ಳಲು ತಯಾರಿಗೊಳಿಸಲಾಗುತ್ತದೆ. ಹತ್ತಿರದ ಕಾರಂಜಿಕೆರೆಗೆ ದೇವಸ್ಥಾನಕ್ಕೆ ಸೇರಿದ ಪ್ರಮುಖರು ಹಾಗೂ ಕುಲದ ಯಜಮಾನರು ದೇವಿಯ ಮುಖವಾಡವನ್ನಿರಿಸಿದ ಕರಗವನ್ನು ನಿರ್ಮಿಸುತ್ತಿದ್ದರು. ಕಾರಂಜಿ ಕೆರೆಯಿಂದ ಹೊಸ ನೀರು ಕಳಸದೊಂದಿಗೆ ಪೂಜೆಯನ್ನು ನೆರವೇರಿಸುತ್ತಾರೆ.

ಜಾನಪದ ಕಲಾ ತಂಡದವರಿಂದ ನೃತ್ಯ, ತಮಟೆ, ಡೊಳ್ಳು ಕುಣಿತ, ವಿವಿಧ ವೇಷಧಾರಿಗಳು ಹೀಗೆ ಅನೇಕ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗುತ್ತವೆ. ಇದರಲ್ಲಿ ಕರಗವೇ ಮೆರವಣಿಗೆಯ ಕೇಂದ್ರ ಬಿಂದುವಾಗಿದ್ದು, ಇಲ್ಲಿ 13 ವರ್ಷಕ್ಕೆ ಒಳಪಟ್ಟ ಬಾಲಕರಿಗೆ ಹೆಣ್ಣು ವೇಷ ಧರಿಸಿ ಅವರ ಮೇಲೆ ಕರಗವನ್ನು ಹೊರಸಿ ಕರೆತರಲಾಗುತ್ತದೆ. ಕರಗದ ಹಿಂದೆ ಶುಭ ಸೂಚಿಸುವ ಫಲ ತಾಂಬೂಲಗಳೊಂದಿಗೆ ಕಳಸವನೊತ್ತ ಹೆಣ್ಣುಮಕ್ಕಳು ಬರುತ್ತಿದ್ದರು.

ಕಾರಂಜಿ ಕೆರೆಯಿಂದ ಹೊರಟ ಈ ಮೆರವಣಿಗೆಯು ನಜ಼ರ್‌ಬಾದ್ ಮುಖ್ಯ ರಸ್ತೆಯಿಂದ ಸಂಚರಿಸಿ ಊರಿನ ಅಂಕದ ಬಾಗಿಲಿಗೆ ಬಂದು ನಿಲ್ಲುತ್ತದೆ. ದೇವಿಗೆ ಕುರಿಯನ್ನು ಬಲಿಯನ್ನಾಗಿ ನೀಡಿ ಊರಿನ ಪ್ರಮುಖ ಬೀದಿಯಲ್ಲಿ ಸಂಚರಿಸಲಾಗುತ್ತದೆ. ಬೆಳಗಿನ ಜಾವ 3 ಗಂಟೆಯವರೆಗೂ ನಡೆಯುವ ಕರಗ ಅಂತಿಮವಾಗಿ ದೇವಸ್ಥಾನವನ್ನು ಸೇರುತ್ತದೆ. ದೇವಿಯ ಕುಲಕ್ಕೆ ಸೇರಿದ ಬಾಂಧವರು ತಮ್ಮ ಹರಕೆಗಳನ್ನು ತೀರಿಸುತ್ತಾರೆ. ಅದರ ಜೊತೆಗೆ ದೇವಸ್ಥಾನದ ವತಿಯಿಂದ ಬಲಿ ಪೂಜೆ ನೆರವೇರಿಸಿ ದೇವಿಯನ್ನು ತೃಪ್ತಿಗೊಳಿಸಲಾಗುತ್ತದೆ. ಈ ಸಂದರ್ಭದಲ್ಲಿ ವಿಶೇಷ ಆಚರಣೆಯೆಂದರೆ ವಿಧವೆಯರನ್ನು ದೇವಸ್ಥಾನದಲ್ಲಿ ಕೂರಿಸಿ ಅವರಿಗೆ ಬೇವಿನ ಸೊಪ್ಪಿನ ಸ್ನಾನ ಮಾಡಿಸಲಾಗುತ್ತದೆ. ಹಂಬಲಿ ಮತ್ತು ಕಾಳುಗಳ ನೈವೇದ್ಯದಿಂದ ದೇವಿ ತೃಪ್ತಳಾಗುತ್ತಾಳೆಂಬ ಬಲವಾದ ನಂಬಿಕೆ ಇದೆ.

ದೇವಿಗೆ ಫಲಾದಿ ಆಹಾರವನ್ನು ಕೊಟ್ಟು ತೀರ್ಥ ಇಟ್ಟ ನಂತರ ಆ ಮಹಿಳೆಯರನ್ನು ಅಲ್ಲಿಂದ ಓಡಿಸಲಾಗುತ್ತದೆ. ಈ ಮೂಲಕ ಊರಿಗೆ ರೋಗ ರುಜಿನಗಳನ್ನು ತರುವ ಮಾರಿಯರನ್ನು ದೂರ ಹಟ್ಟಿದ್ದೇವೆ ಎಂಬ ನಂಬಿಕೆ ಈ ಊರಿನ ಜನರಲ್ಲಿದೆ. ಹಾಗೆ ಎರಡನೇ ದಿನದಂದು ಊರಿನ ಜನರಿಗೆಲ್ಲ ಅನ್ನ ಸಂತರ್ಪಣ ಕಾರ್ಯಕ್ರಮವನ್ನು ಏರ್ಪಾಡು ಮಾಡಲಾಗುತ್ತದೆ. ನಗರದ ಎಲ್ಲಾ ಜನರಿಗೂ ಭಕ್ತಾದಿಗಳಿಗೂ ಮಾಂಸದ ಅಡುಗೆ ಉಣಬಡಿಸಲಾಗುತ್ತದೆ. ಹಾಗೇ ಮೂರನೇ ದಿನ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಹರಿಕಥೆ, ನಾಟಕ, ರಸಮಂಜರಿ ಹೀಗೆ ದಿನಕ್ಕೊಂದು ವಿಶೇಷವಾದ ಕಾರ್ಯಕ್ರಮಗಳ ಆಚರಣೆಯೊಂದಿಗೆ ದೇವಿಯ ಕರಗ ಮಹೋತ್ಸವ ಕಾರ್ಯಕ್ರಮವು ಸಾಂಗವಾಗಿ ನೆರವೇರುತ್ತದೆ. ಉತ್ಸವದ ಕೊನೆಯ ದಿನ ದೇವಿಯ ಕರಗವನ್ನು ವಿಸರ್ಜಿಸಿ ದೇವಸ್ಥಾನದ ಹಿಂಭಾಗದಲ್ಲಿರುವ ತೆಂಗಿನ ಮರದ ಬುಡಕ್ಕೆ ಅವುಗಳನ್ನು ಮುಚ್ಚಿ ಸಂಸ್ಕಾರ ನೀಡಲಾಗುತ್ತದೆ. ಹಾಲು, ತುಪ್ಪ, ಗೋವು ಗಂಜಲದಿಂದ ಕರಗ ಹೊತ್ತ ಬಾಲಕರ ಕೈ ತೊಳೆಯಲಾಗುತ್ತದೆ. ಏಳು ದಿನಗಳೂ ದೇವಾಲಯದಲ್ಲಿ ಬೆಳಗಿನಿಂದ ಸಂಜೆಯವರೆಗೂ ನಿರಂತರ ಪೂಜೆ ನಡೆಯುತ್ತದೆ. ಆ ಸಂದರ್ಭದಲ್ಲಿ ಭಕ್ತಾಧಿಗಳು ಕರಗ ಹೊತ್ತ ಬಾಲಕರ ಪಾದಕ್ಕೆ ನಮಸ್ಕರಿಸುವ ಆಚರಣೆಯುಂಟು. ಹೀಗೆ ಅತ್ಯಂತ ವಿಜೃಂಭಣೆಯಿಂದ ನಡೆಯುವ ಈ ಹೂವಿನ ಕರಗವು ಮೈಸೂರು ಕರಗ ಮತ್ತು ಬೆಂಗಳೂರು ಕರಗದಂತೆಯೇ ಗಾಂಧಿನಗರದ ಮೊಹಲ್ಲಾದಲ್ಲಿ ವಿಶೇಷ ಪ್ರಮುಖ್ಯತೆಯನ್ನು ಪಡೆದಿದೆ.

**ಶ್ರೀ ದುರ್ಗಾಂಬ ದೇವಿಯ ಕರಗ ಮಹೋತ್ಸವ**

ಗಾಂಧಿನಗರದ ಆದಿಜಾಂಬವ ಸಮುದಾಯದ ಕನ್ನಡ ಭಾಷಿಗ ಸಮುದಾಯದವರಿಗೆ ಸೇರಿದ ಈ ದೇವಾಲಯವು 11ನೇ ಕ್ರಾಸ್‌ನ 3ನೇ ಮೇನ್‌ನಲ್ಲಿ ಕಂಡುಬರುತ್ತದೆ. ದುರ್ಗಾದೇವಿ ದೇವಸ್ಥಾನದಲ್ಲಿ

ಯುಗಾದಿ ಹಬ್ಬದ ದಿನ ಕರಗ ಸೇರಿದಂತೆ ಉತ್ಸವ ನಡೆಯುತ್ತದೆ. ಇಲ್ಲಿನ ಪ್ರಮುಖ ಆಕರ್ಷಣೆ ಎಂದರೆ ಹೊಂಬಾಳೆಯಿಂದ ಚಿತ್ರಿಸಿದ ಗಡಿಗೆಯ ಕರಗ. ಅಪ್ರಾಪ್ತ ವಯಸ್ಸಿನ ಇಬ್ಬರು ಹೆಣ್ಣು ಮಕ್ಕಳ ಕೈಯಲ್ಲಿ ಈ ಕರಗವನ್ನು ತರಿಸಲಾಗುತ್ತದೆ. ದೇವಾಲಯದ ಸ್ಥಾಪನೆಗೆ ಕಾರಣೀಕರ್ತರಾದ ಚಿಕ್ಕರಂಗಯ್ಯ ಮತ್ತು ದೊಡ್ಡರಂಗಯ್ಯ ಅವರ ಕುಟುಂಬಕ್ಕೆ ಸೇರಿದ ಗಂಡು ಮಗನ ಹೆಣ್ಣು ಸಂತಾನ ಈ ಕಗರ ಹೊರಲು ಯೋಗ್ಯರು. ಯುಗಾದಿ ಹಬ್ಬದ ದಿನ ಮಧ್ಯಾಹ್ನ 2 ಗಂಟೆಯ ವೇಳೆಗೆ ಕಾರಂಜಿ ಕರೆಯ ಬಳಿ ಹೋಗಿ ಅಲ್ಲಿನ ಅರಳಿಮರದ ಸಮೀಪ ಹೋಮ ಅವನಾದಿಗಳನ್ನು ಮುಗಿಸಿ, ಅಲ್ಲಿಂದ ಕರಗವನ್ನು ಜೊತೆಗೆ ದೇವಿಯನ್ನು ತರುವ ಸಂಪ್ರದಾಯವಿದೆ.

ನಜ಼ರ್‌ಬಾದ್‌ನ ಬಳಿ ಎಸ್.ಪಿ ಆಫೀಸಿನ ಮುಂಭಾಗದಿಂದ ಬಂದು, ಕಾಳಿಕಾ ದೇವಸ್ಥಾನದ ಬಳಿ ವಾದ್ಯ ಗೋಷ್ಠಿ, ಕಲಾ ಪ್ರದರ್ಶನಗಳೊಂದಿಗೆ ದುರ್ಗದೇವಿಯ ಕರಗ ಮಹೋತ್ಸವ ಗಾಂಧಿನಗರದ ಒಳಗೆ ಬರಲು ಸಜ್ಜಾಗುತ್ತದೆ. ಬೀದಿಯ ಅಂಕದ ಬಾಗಿಲ ಬಳಿ ದೇವಿಗೆ ಬಲಿ ನೀಡುವ ಮೂಲಕ ಗಾಂಧಿನಗರದ ಪ್ರಮುಖ ಬೀದಿಗಳು ಸೇರಿದಂತೆ ಮುಖ್ಯ ರಸ್ತೆಗಳಲ್ಲಿ ದುರ್ಗಾದೇವಿಯ ಉತ್ಸವ ಮತ್ತು ಕರಗ ನಡೆಯುತ್ತದೆ. ಹೀಗೆ ರಾತ್ರಿ ಪೂರ ನಡೆಯುವ ಕರಗದ ಮೆರವಣಿಗೆ ನೆರವೇರಿ ಮುಂಜಾನೆ 5 ಗಂಟೆಗೆ ದೇವಸ್ಥಾನವನ್ನು ಬಂದು ತಲುಪುತ್ತದೆ. ಬಲಿ ನೀಡಿದ ಪ್ರಸಾದವನ್ನು ದೇವಸ್ಥಾನಕ್ಕೆ ಸೇರಿದ ಕುಟುಂಬದ ಸದಸ್ಯರ ಮನೆಗಳಿಗೆ ನೀಡಲಾಗುತ್ತದೆ. ಹಬ್ಬ ಮುಗಿದ 5 ಅಥವಾ 9ನೇ ದಿನಕ್ಕೆ ಮರುಪೂಜೆಯನ್ನು ದೇವಿಗೆ ಸಲ್ಲಿಸಲಾಗುತ್ತದೆ. ಈ ಸಂದರ್ಭದಲ್ಲಿ ಊರಿನವರಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗುತ್ತದೆ.

**ಉಪಸಂಹಾರ**

ಹೀಗೆ ಮೈಸೂರಿನ ಗಾಂಧಿನಗರದಲ್ಲಿ ನಡೆಯುವ ಚಾಮುಂಡೇಶ್ವರಿ, ದುರ್ಗಾಂಭ, ಚಿಕ್ಕಮ್ಮದೇವಿ ಮತ್ತು ದೊಡ್ಡಮ್ಮ ತಾಯಿ ಕರಗೋತ್ಸವವು ಸಾಮಾನ್ಯವಾಗಿ ಯುಗಾದಿ ಹಬ್ಬದ ಸಂದರ್ಭದಲ್ಲಿ ನಡೆಯುತ್ತದೆ. ಆದಿಕರ್ನಾಟಕ, ಆದಿಜಾಂಬವ, ಕನ್ನಡ, ತೆಲುಗು, ಹೀಗೆ ಭಾಷೆ, ಜಾತಿ, ಒಳಪಂಗಡಗಳ ಭಿನ್ನ ಭಿನ್ನ ವಿಶಿಷ್ಟ ಆಚರಣೆಗಳ ಸಮ್ಮಿಲನದೊಂದಿಗೆ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಈ ಕರಗೋತ್ಸವಗಳಲ್ಲಿ ಎಲ್ಲರೂ ಭಾಗಿಯಾಗಿ ದೇವರಿಗೆ ವಂದಿಸುವ ಕಾರ್ಯದಲ್ಲಿ ತೊಡಗುವುದು ಒಂದು ವಿಶಿಷ್ಟವೇ ಸರಿ. ಅದು ಮೈಸೂರಿನ ಈ ಭಾಗದಲ್ಲಿ ನಡೆಯುವ ಈ ಕರಗೋತ್ಸವವು ವೈಶಿಷ್ಟ್ಯಪೂರ್ಣವಾಗಿ ಇಂದಿಗೂ ಸಹ ಜನರ ಭಿನ್ನತೆಯಲ್ಲಿ ಏಕತೆಯನ್ನು ಕಂಡುಕೊಂಡಿದೆ.

**ಪರಾಮರ್ಶನ ಗ್ರಂಥಗಳು**


- ಮೈಸೂರು ಕರಗ: ಜಾನಪದೀಯ ಅಧ್ಯಯನ
- Jagadish Ayyar. (2001). South Indian Customs, Asian Educational Services, Madras.
- Mysuru Karaga Mahotsava (12/05/2019). Star of Mysore, Mysuru.

## ಛಾಯಚಿತ್ರಗಳು








